# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 238/2018

Additional witness No.1 in additional charge sheet.

| | | |
|---|---|---|
| ಸಾಕ್ಷಿದಾರರ ಹೆಸರು | : ಡಾಃ ರವಿ ಕುಮಾರ್ ಕೆ. | ಪಿಡಬ್ಲ್ಯೂ ಃ 10 |
| ತಂದೆಯ / ಗಂಡನ ಹೆಸರು | : ಲೇಃ ಜಿ. ಕೃಷ್ಣಪ್ಪ | |
| ವಯಸ್ಸು | : 39 ವರ್ಷ | |
| ಉದ್ಯೋಗ | : ಹಿರಿಯ ವೈಜ್ಞಾನಿಕ ಅಧಿಕಾರಿ , ಆರ್ ಎಫ್ ಎಸ್ ಎಲ್ , ಮೈಸೂರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 06.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು 2014 ರಿಂದ ಮೈಸೂರಿನ **RFSL** ನಲ್ಲಿ ವೈಜ್ಞಾನಿಕ ಅಧಿಕಾರಿಯೂ , 2019 ರಿಂದ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 12.06.2018 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ , ಪ್ರಕರಣದ ತನಿಖಾಧಿಕಾರಿಯವರು ಪಿಸಿ 446 ರವರ ಮೂಲಕ ಒಂದು ಮೊಹರು ಮಾಡಿದ ಬಟ್ಟೆಯ ಚೀಲದಲ್ಲಿ ವಸ್ತುವನ್ನು ಕಳುಹಿಸಿಕೊಟ್ಟಿದ್ದರು. ಸದರಿ ವಸ್ತು ಮತ್ತು ದಾಖಲಾತಿಯನ್ನು ನಮ್ಮ ಕಛೇರಿಯ ಸ್ವಾಗತ ವಿಭಾಗದಲ್ಲಿ ಪರಿಶೀಲಿಸಿ, ಪ್ರಕರಣವನ್ನು **TS**/1583/2018 ಎಂದು ನೊಂದಣಿ ಮಾಡಿಕೊಂಡು ನಂತರ ವಿಭಾಗೀಯ ಸಹಾಯಕ ನಿರ್ದೇಶಕರು ಅದನ್ನು ನನ್ನಲ್ಲಿಗೆ ವೈಜ್ಞಾನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿದ್ದರು. ನಾನು ಅದನ್ನು ಪರಿಶೀಲಿಸಿದಾಗ,

ಮೊಹರು ಮತ್ತು ಮಾದರಿ ಮೊಹರು ತಾಳೆಯಾಗುತ್ತಿತ್ತು. ಮೊಹರು ಸುಸ್ಥಿತಿಯಲ್ಲಿತ್ತು. ಅದನ್ನು ತೆಗೆದು ಬಟ್ಟೆಯ ಚೀಲದ ಒಳಗೆ ಇದ್ದ ವಸ್ತುವನ್ನು ಪರಿಶೀಲಿಸಲಾಗಿ ಅದರಲ್ಲಿ '**Bone pieces'** (ಮೂಳೆಯ ಚೂರುಗಳು) ಇದ್ದವು. ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ನಾನು ಈ ಕೆಳಕಂಡಂತೆ ನಾನು ನನ್ನ ವರದಿಯನ್ನು ನೀಡಿರುತ್ತೇನೆ.

**"Residues of Volatile poison, Pesticides, Barbiturates, Benzodiazepine group of drugs. Toxic metal ions and anions were not detected in all the above stated articles"**. ಸದರಿ ಮೂಳೆಯ ಪೀಸುಗಳಲ್ಲಿ ವಿಷದ ಅಂಶ ಕಂಡು ಬಂದಿರುವುದಿಲ್ಲ. ಈ ಬಗ್ಗೆ ನನ್ನ ವರದಿಯನ್ನು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 16 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 16(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಮೂಳೆಗಳ ಪೀಸುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅವುಳನ್ನು ಈಗಾಗಲೇ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸದರಿ ಪ್ಲಾಸ್ಟಿಕ್ ಬಾಟಲಿನ ಮೇಲೆ ನಮ್ಮ ಕಛೇರಿಯು ನೊಂದಣಿ ಮಾಡಿದ **TS**/1583/2018 ಇರುತ್ತದೆ. ಅದರ ಕೆಳಗೆ ನನ್ನ ಸಣ್ಣ ಸಹಿ ಇರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು "ಇರುವುದಿಲ್ಲ " ಎಂದಿರುತ್ತಾರೆ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**